# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 147 (188) |
| ಉತ್ತರಿಸಬೇಕಾದ ದಿನಾಂಕ | 14.12.2021 |
| ಉತ್ತರಿಸಬೇಕಾದವರು | ನಗರಾಭಿವೃದ್ಧಿ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ಚಿಕ್ಕಮಗಳೂರು ನಗರದಲ್ಲಿ ಕೆ.ಯು.ಡಬ್ಲ್ಯೂ.ಎಸ್ ನಿಂದ ಎಷ್ಟು ಕಿ.ಮೀ ಯುಜಿಡಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ; ಸದರಿ ಕಾಮಗಾರಿಯು ಪ್ರಾರಂಭಗೊಂಡಿದ್ದು ಯಾವಾಗ; ಯಾವ ಕಾಲಮಿತಿಯೊಳಗೆ ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಬೇಕಾಗಿದೆ; ಸದರಿ ಕಾಮಗಾರಿಯನ್ನು ನಿರ್ವಹಿಸುತ್ತಿರುವ ಗುತ್ತಿಗೆದಾರರು ಯಾರು; (ಮಾಹಿತಿ ನೀಡುವುದು). | ಮೊದಲನೇ ಹಂತದಲ್ಲಿ ಚಿಕ್ಕಮಗಳೂರು ನಗರದಲ್ಲಿ ಶೇ.30% ಒಳಚರಂಡಿ ಯೋಜನೆ ಅಳವಡಿಸಲಾಗಿದ್ದು, ನಂತರ 2ನೇ ಹಂತದಲ್ಲಿ ನಗರದ ಶೇ.70% ಭಾಗಕ್ಕೆ ಒಳಚರಂಡಿ ಸಂಪರ್ಕ ಕಲ್ಪಿಸಲು 230.23 ಕಿ.ಮೀ ಉದ್ದದ ಸೀವರ್ ಜಾಲದಲ್ಲಿ 214.50 ಕಿ.ಮೀ ನಷ್ಟು ಕೊಳವೆಗಳನ್ನು ಅಳವಡಿಸಲಾಗಿದೆ.<br><br>• ಸದರಿ ಯೋಜನೆಯು ನವಂಬರ್-2011 ರಲ್ಲಿ ಪ್ರಾರಂಭಿಸಲಾಗಿದ್ದು, ನವೆಂಬರ್-2013 ರ ಅಂತ್ಯಕ್ಕೆ ಕೊಳವೆ ಅಳವಡಿಸುವ ಕಾಮಗಾರಿ ಮುಗಿಸಲು ಉದ್ದೇಶಿಸಲಾಗಿತ್ತು. ಮಲಿನ ನೀರು ಸಂಸ್ಕರಿಸುವ ಘಟಕ ನಿರ್ಮಿಸುವ ಕಾಮಗಾರಿಯನ್ನು ಮಾರ್ಚ್-2015 ರಲ್ಲಿ ಪ್ರಾರಂಭಿಸಿ ಸೆಪ್ಟಂಬರ್-2016 ರಲ್ಲಿ ಮುಗಿಸಲು ಉದ್ದೇಶಿಸಿ, ಮಾರ್ಚ್-2019 ಪೂರ್ಣಗೊಳಿಸಿ ಚಾಲನೆ ಮಾಡಲಾಗಿರುತ್ತದೆ. ಸದರಿ ಮಲಿನ ನೀರು ಸಂಸ್ಕರಿಸುವ ಘಟಕದಲ್ಲಿ ಪ್ರಸ್ತುತ 8.0 ಎಂ.ಎಲ್.ಡಿ ಮಲಿನ ನೀರನ್ನು ಸಂಸ್ಕರಿಸಲಾಗುತ್ತಿದೆ.<br><br>ಸದರಿ ಯೋಜನೆಯನ್ನು ಮುಖ್ಯವಾಗಿ 6 ಪ್ರತ್ಯೇಕ ಪ್ಯಾಕೇಜ್‌ಗಳಾಗಿ ಕೈಗೊಳ್ಳಲಾಗಿರುತ್ತದೆ.<br><br>• ಪ್ಯಾಕೇಜ್(1) ರಡಿ ಚಿಕ್ಕಮಗಳೂರಿನ ಮುಖ್ಯ ಪ್ರದೇಶಗಳಿಗೆ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಕಾಮಗಾರಿಗಳನ್ನು ಮೆ\|\| ಅಭಿರಾಮ್ ಇನ್ಫ್ರಾಪ್ರಾಜೆಕ್ಟ್, ಪ್ರೈ.ಲಿಮಿಟೆಡ್, |

| | | |
|---|---|---|
| | | ಹೈದ್ರಾಬಾದ್ ರವರಿಗೆ ನವೆಂಬರ್-2011 ರಂದು ವಹಿಸಲಾಗಿತ್ತು. ಸದರಿಯವರು ಕಾಮಗಾರಿಗಳನ್ನು 2013 ರ ಅಂತ್ಯಕ್ಕೆ ಪೂರ್ಣಗೊಳಿಸಬೇಕಾಗಿತ್ತು. ಆದರೆ ಪೂರ್ಣಗೊಳಿಸುವಲ್ಲಿ ವಿಫಲವಾದ್ದರಿಂದ ಟೆಂಡರ್ ಕರಾರನ್ನು ದಿನಾಂಕ: 09.03.2020 ರಂದು ರದ್ದುಗೊಳಿಸಿ, ಗುತ್ತಿಗೆದಾರರ ವೆಚ್ಚ ಮತ್ತು ಹೊಣೆಗಾರಿಕೆ ಅಡಿಯಲ್ಲಿ ಕೈಗೊಳ್ಳಲಾಗಿರುತ್ತದೆ.<br>• ಪ್ಯಾಕೇಜ್(2) ರ ಕಾಮಗಾರಿಗಳಡಿ, ಕೆ.ಹೆಚ್.ಬಿ, ಕಲ್ಯಾಣ ನಗರದ, ಚಿಕ್ಕಕುರುಬರಹಳ್ಳಿ ಹಾಗೂ ಹಿರೇಮಗಳೂರು ಸೇರಿದ ಪ್ರದೇಶಗಳಿಗೆ ಒಳಚರಂಡಿ ಕಾಮಗಾರಿಗಳನ್ನು ನಿರ್ವಹಿಸಲು ಶ್ರೀ.ಹೆಚ್.ಕೆ.ಕಾಂತರಾಜು ರವರಿಗೆ ವಹಿಸಲಾಗಿದ್ದು, ಕಾಮಗಾರಿಗಳು ಬಹುತೇಕ ಪೂರ್ಣಗೊಂಡಿದೆ.<br>• ಪ್ಯಾಕೇಜ್ (3) ರ ಕಾಮಗಾರಿಯಾದ 20 ಎಂ.ಎಲ್.ಡಿ ಸಾಮರ್ಥ್ಯದ ಎಂ.ಬಿ.ಬಿ.ಆರ್ ತಾಂತ್ರಿಕತೆಯ ಒಳಚರಂಡಿ ನೀರು ಶುದ್ದೀಕರಣ ಘಟಕವನ್ನು ನಿರ್ಮಿಸಲು ಮೆ\|\| ಒಯಸಿಸ್ ಇಪಿಸಿ ಸಲ್ಯೂಶನ್ಸ್, ಅಹಮದಾಬಾದ್ ಇವರಿಗೆ ವಹಿಸಲಾಗಿದ್ದು, ಸದರಿ ಘಟಕವನ್ನು ಮಾರ್ಚ್-2019 ರಲ್ಲಿ ಪೂರ್ಣಗೊಳಿಸಿ ಚಾಲನೆಗೊಳಿಸಲಾಗಿದ್ದು, ಸದ್ಯ ಸುಮಾರು 8.0 ಎಂ.ಎಲ್.ಡಿ ಒಳಚರಂಡಿ ನೀರನ್ನು ಸಂಸ್ಕರಿಸಲಾಗುತ್ತಿದೆ.<br>• ಪ್ಯಾಕೇಜ್ (4) ಮತ್ತು (5) ಕಾಮಗಾರಿಗಳಾದ ಪಂಪಿಂಗ್ ಮಿಷನರಿ ಹಾಗೂ ಇತರೆ ಕಾಮಗಾರಿಗಳನ್ನು ನಿರ್ವಹಿಸಲು ಮೆ\|\| ಶುಭೋದಯ ಇಂಜಿನಿಯರ್ಸ್, ಮಂಗಳೂರು ರವರಿಗೆ ವಹಿಸಲಾಗಿದ್ದು, ಕಾಮಗಾರಿಗಳನ್ನು ಪೂರ್ಣಗೊಳಿಸಿ ಚಾಲನೆಗೊಳಿಸಲಾಗಿದೆ.<br>• ಪ್ಯಾಕೇಜ್ (6) ರ ಅಡಿಯಲ್ಲಿ ರಾಷ್ಟ್ರೀಯ ಹೆದ್ದಾರಿಯನ್ನು ನಗರದ 7 ಭಾಗಗಳಲ್ಲಿ |

| | | |
|---|---|---|
| | | ದಾಟಲು ಮೆ\|\| ಯುನಿಕ್ ಕನ್ಸಟ್ರಕ್ಷನ್ಸ್ ಹೈದ್ರಾಬಾದ್ ಇವರಿಗೆ ವಹಿಸಲಾಗಿದ್ದು, ಕಾಮಗಾರಿ ಪೂರ್ಣಗೊಂಡಿರುತ್ತದೆ.<br><br>ಪ್ಯಾಕೇಜ್ (1)ರ ಕಾಮಗಾರಿಯ ಟೆಂಡರ್‌ನ್ನು ರದ್ದುಗೊಳಿಸಿದ ನಂತರ, ಸದರಿ ಟೆಂಡರ್‌ನಡಿ ಉಳಿಕೆ ಕಾಮಗಾರಿಗಳನ್ನು ಕೈಗೊಳ್ಳಲು ಪ್ರತ್ಯೇಕ ಎರಡು ಟೆಂಡರ್‌ಗಳನ್ನು ಕರೆಯಲಾಗಿದ್ದು,<br><br>1. ಶ್ರೀ ಗುರು ರಾಘವೇಂದ್ರ ಎಂಟರ್ ಪ್ರೆಸಸ್, ಮೈಸೂರು ರವರಿಗೆ ವಹಿಸಲಾಗಿದ್ದು, ಸದರಿಯವರು 4 ಜಾಗಗಳಲ್ಲಿ ಔಟ್‌ಫಾಲ್ ಅಳವಡಿಸುವ ಕಾಮಗಾರಿಗಳನ್ನು ಕೈಗೊಂಡು ಪೂರ್ಣಗೊಳಿಸಿ ಚಾಲನೆ ಮಾಡಲಾಗಿರುತ್ತದೆ. (ಚನ್ನಾಪುರ ರಸ್ತೆಯಲ್ಲಿ, ದೀಪಾ ನರ್ಸಿಂಗ್ ಹೋಮ್ ರಸ್ತೆಯಲ್ಲಿ, ಕೋಟೆಕೆರೆ ಹತ್ತಿರ ಹಾಗೂ ಕರ್ಕಿ ಪೇಟೆಯಿಂದ ಕತ್ರಿಮಾರಮ್ಮ ದೇವಸ್ಥಾನದ ವರೆಗೆ).<br><br>2. 2ನೇ ಟೆಂಡರ್‌ನ್ನು ಮೆ\|\|ಮೈಕಾನ್ ಕನ್ಸಟ್ರಕ್ಷನ್ಸ್, ಕಂಪನಿ, ಬೆಂಗಳೂರು ರವರಿಗೆ ವಹಿಸಲಾಗಿದ್ದು, ಸದರಿಯವರು ಪ್ಯಾಕೇಜ್(1) ರಡಿಯಲ್ಲಿ ಉಪ್ಪಳ್ಳಿಯಿಂದ ಮೂರುಮನೆ ಹಳ್ಳಿಯವರೆಗೆ ಬರುವ 1ನೇ ಔಟ್‌ಫಾಲ್ ಹಾಗೂ ಕರ್ಕಿಪೇಟೆಯಿಂದ ಚನ್ನಾಪುರ ರಸ್ತೆಯವರೆಗೆ ಬರುವ 2ನೇ ಔಟ್‌ಫಾಲ್‌ನಲ್ಲಿ ಒಟ್ಟು 65 ಸಂಪರ್ಕ ರಸ್ತೆಗಳನ್ನು ಜೋಡಣೆ ಕೆಲಸ ನಿರ್ವಹಿಸಬೇಕಾಗಿದ್ದು, 18 ರಸ್ತೆಗಳ ಸಂಪರ್ಕ ಕಲ್ಪಿಸಿ ಒಳಚರಂಡಿ ನೀರನ್ನು ಶುದ್ದೀಕರಣ ಘಟಕಕ್ಕೆ ಹರಿಸುವಂತೆ ಮಾಡಲಾಗಿದೆ. ಉಳಿಕೆ ರಸ್ತೆಗಳ ಸಂಪರ್ಕ ಮಾಡಲು ಅಕಾಲಿಕ ಮಳೆಯಿಂದಾಗಿ ಕುಂಠಿತವಾಗಿದ್ದು, ಸದ್ಯ ಪ್ರಗತಿಯಲ್ಲಿದೆ. ಶ್ರೀನಿವಾಸ ನಗರದಿಂದ ಕಾಫೀ ಡೇ ವರೆಗೆ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ 1900 ಮೀಟರ್ ಕೊಳವೆ ಮಾರ್ಗ |

| | | |
|---|---|---|
| | | ಅಳವಡಿಸಬೇಕಾಗಿದ್ದು ಇದರಲ್ಲಿ 715 ಮೀಟರ್ ಉದ್ದದ ಕೊಳವೆಗಳನ್ನು ಅಳವಡಿಸಲಾಗಿದ್ದು, ಉಳಿಕೆ ಕಾಮಗಾರಿ ಪ್ರಗತಿಯಲ್ಲಿದೆ. ಸದರಿ ಪ್ಯಾಕೇಜ್‌ನ್ನು ಜನವರಿ-2022 ರ ಅಂತ್ಯಕ್ಕೆ ಪೂರ್ಣಗೊಳಿಸಲು ಯೋಜಿಸಲಾಗಿದೆ.<br><br>ಅಲ್ಲದೇ, ಪ್ಯಾಕೇಜ್ (1) ರ ಕಾಮಗಾರಿಗಳಲ್ಲಿನ ಲೋಪದೋಷಗಳ ಬಗ್ಗೆ ವರದಿ ನೀಡಲು, ಯಥಾ ನಕ್ಷೆ ತಯಾರಿಸಲು ಹಾಗೂ ಹಾಳಾಗಿರುವ ಫ್ರೇಮ್ ಮತ್ತು ಕವರ್‌ಗಳನ್ನು ಬದಲಾಯಿಸುವ ಕಾಮಗಾರಿಯ ಪ್ರತ್ಯೇಕ ಟೆಂಡರ್‌ನ್ನು ಮೆ\|\| ಶ್ರೀ ಗುರು ರಾಘವೇಂದ್ರ ಎಂಟರ್ ಪ್ರೆಸಸ್ ರವರಿಗೆ, ಪ್ಯಾಕೇಜ್(1)ರ ಮೂಲ ಗುತ್ತಿಗೆದಾರರಾದ ಮೆ\|\|ಅಭಿರಾಮ್ ಇನ್ಫ್ರಾಪ್ರಾಜೆಕ್ಟ್, ಪ್ರೈ.ಲಿಮಿಟೆಡ್, ರವರ ವೆಚ್ಚ ಮತ್ತು ಹೊಣೆಗಾರಿಕೆಯಡಿಯಲ್ಲಿ ವಹಿಸಲಾಗಿದ್ದು, ಲೋಪದೋಷಗಳ ವರದಿ ಯಥಾ ನಕ್ಷೆ ತಯಾರಿಸಲು ಡಿಸೆಂಬರ್-2021 ರವರೆಗೆ ಅಂತಿಮ ಗಡುವು ನೀಡಲಾಗಿದೆ.<br><br>ಚಾಲ್ತಿಯಲ್ಲಿರುವ ಒಳಚರಂಡಿ ಕಾಮಗಾರಿಗಳನ್ನು ಜನವರಿ-2022 ರ ಅಂತ್ಯಕ್ಕೆ ಪೂರ್ಣಗೊಳಿಸಲು ಗುರಿಯನ್ನು ನಿಗಧಿಪಡಿಸಿಕೊಳ್ಳಲಾಗಿದೆ.<br><br>• ಹಾಲಿ ನಗರದಲ್ಲಿ 9000 ಮನೆಗಳಿಗೆ ಮನೆ ಸಂಪರ್ಕ ಇದ್ದು, ಮೂರನೇ ಹಂತದ ಯೋಜನೆಯಲ್ಲಿ ಉಳಿದ 17000 ಮನೆಗಳಿಗೆ ಮನೆ ಸಂಪರ್ಕ ನೀಡಲು ಹಾಗೂ ಮೊದಲನೇ ಹಂತದ ಒಳಚರಂಡಿ ವ್ಯವಸ್ಥೆಯಲ್ಲಿ ಸುಮಾರು 10.0 ಕಿ.ಮೀ ದುರಸ್ಥಿಪಡಿಸುವ ಹಾಗೂ ರಸ್ತೆಗಳನ್ನು ದುರಸ್ಥಿಪಡಿಸುವ ಕಾಮಗಾರಿ ಸೇರಿದಂತೆ ಉಳಿದ ಕಾಮಗಾರಿಗಳ ರೂ.26.31 ಕೋಟಿಗಳ ಅಂದಾಜು ಮೊತ್ತಕ್ಕೆ ಕರ್ನಾಟಕ ಘನ ಸರ್ಕಾರವು ದಿನಾಂಕ: 03.06.2021 ರಲ್ಲಿ ಆಡಳಿತಾತ್ಮಕ |

| | | |
|---|---|---|
| | | ಅನುಮೋದನೆ ನೀಡಲಾಗಿದ್ದು, ಈಗಾಗಲೇ ಟೆಂಡರ್ ಕರೆಯಲಾಗಿದ್ದು, 1 ಮತ್ತು 2ನೇ ಕರೆಗಳಿಗೆ ಯಾವುದೇ ಗುತ್ತಿಗೆದಾರರು ಭಾಗವಹಿಸದೇ ಇದ್ದ ಕಾರಣ ದಿನಾಂಕ: 21.09.2021 ರಂದು ಮಾನ್ಯ ನಗರಾಭಿವೃದ್ಧಿ ಸಚಿವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನಲ್ಲಿ ಜರುಗಿದ ಸಭೆಯಲ್ಲಿ ನಿರ್ಣಯಿಸಿದಂತೆ ಕಾಮಗಾರಿಯನ್ನು 3 ಪ್ರತ್ಯೇಕ ಭಾಗಗಳಾಗಿ ವಿಭಜಿಸಿ ಟೆಂಡರ್ ಅಹ್ವಾನಿಸಲಾಗಿದ್ದು, ಗುತ್ತಿಗೆದಾರರನ್ನು ನೇಮಿಸುವ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ. |
| ಆ) | ಯು.ಜಿ.ಡಿ ಕಾಮಗಾರಿ ಮಾಡುವ ಸಂದರ್ಭದಲ್ಲಿ ಒಳ್ಳೆಯ ರಸ್ತೆಗಳನ್ನು ಅಗೆದು ಹಾಳು ಮಾಡಿ, ಅದನ್ನು ಸರಿಯಾದ ರೀತಿಯಲ್ಲಿ ರಸ್ತೆ ನಿರ್ಮಾಣ ಕಾರ್ಯ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅಂತಹ ಗುತ್ತಿಗೆದಾರರ ವಿರುದ್ಧ ಸರ್ಕಾರ ತೆಗೆದುಕೊಂಡ ಕ್ರಮವೇನು? | ನಗರದಲ್ಲಿ ಒಳಚರಂಡಿ ಕಾಮಗಾರಿ ಪೂರ್ಣಗೊಂಡಿದ್ದು, ಕತ್ತರಿಸಿದ ರಸ್ತೆಯ ಭಾಗಗಳಿಗೆ ರಸ್ತೆಯನ್ನು ಯಥಾ ಸ್ಥಿತಿಗೆ ತರಲಾಗಿದೆ.<br><br>ಉಳಿದಂತೆ ನಗರದಲ್ಲಿ ಅಮೃತ್ ಕುಡಿಯುವ ನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ವಿತರಣಾ ಜಾಲ, 27000 ಮನೆಗಳಿಗೆ ಗೃಹ ಸಂಪರ್ಕ ನೀಡುವ ಸಂದರ್ಭದಲ್ಲಿ ರಸ್ತೆಗಳನ್ನು ಕತ್ತರಿಸಲಾಗಿದ್ದು, ಕತ್ತರಿಸಿದ ರಸ್ತೆ ಭಾಗಗಳನ್ನು ಯಥಾ ಸ್ಥಿತಿಗೆ ತರುವ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಗುತ್ತಿಗೆದಾರರಿಗೆ ಡಿಸೆಂಬರ್-2021 ರ ಅಂತಿಮ ಗಡುವು ನೀಡಲಾಗಿದೆ. |

ಸಂಖ್ಯೆ : ನಅಇ 192 ಯುಎಂಎಸ್ 2021

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು
(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು